ನಾಲ್ಕು ಮಂದಿಗೆ ಒಟ್ಟು ಎರಡು ಸಾವಿರ ರೂಪಾಯಿಯ ಚಿಲ್ಲರೆ ಬೇಕಿತ್ತು. ಆದರೆ ಹಾಟ್‌ಮಿಟ್ಲೆ ಒಂದು ಸಾವಿರ ಅಂದಿದ್ದಾನೆ ಎಂದು ಒಂದು ಸಾವಿರ ರೂಪಾಯಿ ಮೌಲ್ಯದ ಹತ್ತತ್ತರ ನೋಟಿನ ಕಟ್ಟು ಕೊಟ್ಟು ಚಿಲ್ಲರೆ ಕಟ್ಟು ತಗೊಂಡರು. ಆನಂತರ ಇನ್ನೊಂದು ಸಾವಿರ ಬೇಕು ಎಂದು ಹಾಟ್‌ಮಿಟ್ಲೆ ಎದುರು ಬೇಡಿಕೆ ಇಟ್ಟರು. 'ನಾಳೆ' ಎಂದಷ್ಟೆ ಉತ್ತರ ಬಂತು. ಚಿಲ್ಲರೆ ಸಮಸ್ಯೆಯ ಈ ಸಮಯದಲ್ಲಿ ನಾಳೆ ಮತ್ತೊಂದು ಸಾವಿರ ಚಿಲ್ಲರೆ ದೊರೆಯುವುದು ಖಚಿತಗೊಂಡಿದ್ದರಿಂದ 'ನಾಳೆ' ಎನ್ನುವುದು ಬರೀ ಮಾತಲ್ಲ ಮಧುರ ಗಾನದಂತೆ ಕೇಳಿಸಿತ್ತು.

ಮರುದಿನ ಬಂದವರು ಒಂದು ಸಾವಿರ ರೂಪಾಯಿ ತಂದಿದ್ದರಾದರೂ ಅದು ಎಲ್ಲವೂ ಹತ್ತರ ನೋಟುಗಳಾಗಿರಲಿಲ್ಲ. ಒಂದು ಐನೂರರ ನೋಟು, ಎರಡು ನೂರರ ನೋಟು. ಉಳಿದವಷ್ಟೆ ಹತ್ತರ ನೋಟುಗಳಾಗಿದ್ದವು. 'ಚಿಲ್ಲರೆ' ಎಂದ ತಕ್ಷಣ 'ಒಂದು ಸಾವಿರ' ಎಂದು ಚಿಲ್ಲರೆ ಕಟ್ಟು ಎದುರಿಗಿಟ್ಟ. ಇವರೂ ನೋಟುಗಳನ್ನು ಹಾಟ್‌ಮಿಟ್ಲೆಗೆ ನೀಡಿದಾಗ ಆತ ಹಾವು ನೋಡಿದವನಂತೆ ಬೆಚ್ಚಿಬಿದ್ದು ನೋಟಿನ ಕಟ್ಟನ್ನು ಎಸೆದು 'ಹತ್ತು' ಅಂದ. ಅಲ್ಲಿ ಇದ್ದ ಬದ್ದ ಅಂಗಡಿಗಳಲ್ಲಿ ಸಂಗ್ರಹಿಸಿದರೂ ಒಂದು ಸಾವಿರಕ್ಕೆ ಬೇಕಾದಷ್ಟು ಹತ್ತರ ನೋಟುಗಳು ಸಿಗಲಿಲ್ಲ. ಅಲ್ಲೊಂದು ವ್ಯವಸಾಯಿಕ ಸೇವಾ ಬ್ಯಾಂಕ್‌ಗೆ ಹೋಗಿ ಕಷ್ಟಪಟ್ಟು ಹೊಂದಿಸಿ ನೀಡಿ, ಚಿಲ್ಲರೆ ಒಯ್ಯಬೇಕಾಯಿತು.

ಸಮಯ ಸಂದರ್ಭಗಳೇ ಎಲ್ಲವನ್ನು ಕಲಿಸುತ್ತವೆ ಎನ್ನುವಂತೆ, ಹಾಟ್‌ಮಿಟ್ಲೆ ದಿನಕ್ಕೆ ಒಂದು ಸಾವಿರಕ್ಕಿಂತ ಹೆಚ್ಚಾಗಿ ಕೊಡುತ್ತಿರಲಿಲ್ಲ. ಅದಲ್ಲದೇ ಹತ್ತರ ನೋಟುಗಳೇ ಆಗಬೇಕು. ಹಿಂದಿನ ದಿನ ಹೇಳಿದರೆ ಮಾತ್ರ ಮರುದಿನ ಚಿಲ್ಲರೆ ಎಂಬುದನ್ನು ಅವನೊಂದಿಗಿನ ವ್ಯವಹಾರದ ಅನುಭವಗಳು ತಿಳಿಸಿಕೊಟ್ಟವು. ಹತ್ತರ ನೋಟಿನ ಕಟ್ಟಿನಲ್ಲಿ ಸ್ವಲ್ಪ ಕಡಿಮೆ ಇಟ್ಟರೆ ಹಾಟ್‌ಮಿಟ್ಲೆಗೆ ಗೊತ್ತಾಗುವುದಿಲ್ಲ ಎಂದು ಚಿಲ್ಲರೆ ಕೊಂಡೋಗುವವರು ತಮ್ಮೊಳಗೆ ಗುಟ್ಟಾಗಿ ಮಾತನಾಡಿಕೊಂಡರಾದರೂ 'ಸಿಐಡಿ' ಎಂಬ ಶಬ್ದ ಅದನ್ನೆಲ್ಲ ಮಾಡದಂತೆ ತಡೆದಿತ್ತು.

ಅಂತು ಹಾಟ್‌ಮಿಟ್ಲೆ ಬಿಳಲೂರಿನಲ್ಲಿ ಇಲ್ಲದ ವಾರದಲ್ಲಿ ಎರಡು ದಿನಗಳನ್ನು ಹೊರತುಪಡಿಸಿ ಮುಂದಿನ ನಾಲ್ಕೈದು ತಿಂಗಳಲ್ಲಿ ನಿರಂತರ ಚಿಲ್ಲರೆ ಸರಬರಾಜಾಯಿತು. ಜನರಿಗೆ ಈಗ ಮತ್ತೊಂದು ಸಂಶಯ ಉಂಟಾಯಿತು. ಈ ನೋಟುಗಳನ್ನು ಎಲ್ಲಿ ಇಡುತ್ತಾನೆ, ಏನು ಮಾಡುತ್ತಾನೆ ಎಂದು. ಇನ್ನೆರಡು ತಿಂಗಳೊಳಗೆ ಮಳೆಗಾಲ ಬೇರೆ ಶುರುವಾಗಲಿದೆ. ಚಿಲ್ಲರೆಯಾದರೆ ಮಳೆಗೆ ಒದ್ದೆಯಾದರೂ ಏನಾಗುವುದಿಲ್ಲ. ನೋಟಿನ ಕತೆಯೇನು ಎಂಬುದು ಅವರ ಸಂಶಯಕ್ಕೆ ಕಾರಣವಾಗಿತ್ತು. ಆದರೆ ಮಳೆ ಆರಂಭಗೊಳ್ಳುವ ಮೊದಲು ಹಾಟ್‌ಮಿಟ್ಲೆಯಲ್ಲಿ ಸಾವಿರದ ಕಟ್ಟಿನ ಚಿಲ್ಲರೆ ಮುಗಿದು ಹೋಯಿತು. ಹಾಟ್‌ಮಿಟ್ಲೆಯೇ ಒಂದು ದಿನ ಅಧಿಕೃತ ಘೋಷಣೆ ಎಂಬಂತೆ 'ಇಲ್ಲ' ಎಂದು ಹೇಳಿಬಿಟ್ಟ.

ಸ್ವಲ್ಪ ದಿನ ಕಳೆಯಿತು. ನೂರರ ನೋಟು ನೀಡಿ ಹತ್ತರ ನೋಟುಗಳನ್ನು ಪಡೆಯಲು ಸಾಧ್ಯವೇ ಎಂದು ಕಂಡಕ್ಟರ್‌ಗಳು ಮಾತನಾಡಿಕೊಂಡರು. ಇದನ್ನು ಹೇಗಾದರೂ ಹಾಟ್‌ಮಿಟ್ಲೆಗೆ ತಲುಪಿಸಿ ಒಪ್ಪುವಂತೆ ಮಾಡಬೇಕು ಎಂದು ನಿರ್ಧರಿಸಿದರು.

ಅವರ ಅನ್ನಿಸಿಕೆಗೆ ವಿರುದ್ಧವಾದ ಘಟನೆಗಳು ನಡೆದವು. ಯಾರೂ ಯೋಚನೆಯೇ ಮಾಡದ ರೀತಿಯಲ್ಲಿ ಇದ್ದಕ್ಕಿದ್ದಂತೆ ಹಾಟ್‌ಮಿಟ್ಲೆ ವರ್ತಿಸತೊಡಗಿದ. ಒಂದು ರೂಪಾಯಿ ಕೊಟ್ಟವರಿಗೆ 10 ರೂಪಾಯಿ ನೋಟು ಕೊಡತೊಡಗಿದ. ಇದು ಅತಿವೇಗವಾಗಿ ಸುತ್ತಲೂ ಹರಡಿತು. ಯಾರೆಲ್ಲ ಹಿಂದೆ ಮಾಮೂಲಾಗಿ ಒಂದು ರೂಪಾಯಿ ನೀಡುತ್ತಿದ್ದರೋ ಅವರ ಅಂಗಡಿ, ಗೂಡಂಗಡಿ,